ರಮೇಶ ಜಿ. ಬೊಂಗಾಳೆ, ಬೈಲಹೊಂಗಲ
*ಅಂದಿನ ಶಿಕ್ಷಣಕ್ಕೂ, ಇಂದಿನ ಶಿಕ್ಷಣಕ್ಕೂ ವ್ಯತ್ಯಾಸವೇನು ಸಾರ್?*




ಆಗಿನ ಶಾಲೆ ಗುರುಗಳದು ಸರಸ್ವತೀ ನಮಸ್ತುಭ್ಯಂ... , ಈಗಿನದು ಲಕ್ಷ್ಮೀ ಬಾರಮ್ಮ..... !

ಷಡಕ್ಷರಸ್ವಾಮಿ ಎಸ್.ಪಿ., ಸೋರಲಮಾವು
*ಏಕಲವ್ಯ ಮತ್ತು ಕರ್ಣರನ್ನು ಜಾತಿ ನಿಂದನೆ ಮಾಡಿ ಅವಮಾನ ಮಾಡಿದ ಪಾಂಡವರು ಧರ್ಮಾತ್ಮರಾಗುತ್ತಾರೆಯೆ ಗುರೂಜೀ...?*
ಅದು ಅಂದಿನ ಕ್ಷಾತ್ರ ಧರ್ಮ ಮೈ ಬಾಯ್; ಅವರೇನೂ ಜಾತ್ಯತೀತ ಪಾಂಡವ ದಳ ಎಂದು ಬೋರ್ಡ್ ಹಾಕಿಕೊಂಡಿರಲಿಲ್ಲವಲ್ಲ!

ಕೆ.ಮೈಥಿಲಿಕೃಷ್ಣ, ಬೆಂಗಳೂರು
*ನಿಮಗೆ ಹಿಡಿಸುವ ಭಾಷೆ ಇಂಗ್ಲಿಷೋ, ಕನ್ನಡವೋ, ಇಂಗ್ಲಿಷ್- ಕನ್ನಡವೋ?*
ನೆಚ್ಚಿನ ಇಂಗ್ಲಿಷ್, ಕೆಚ್ಚಿನ ಕನ್ನಡ, ಹೆಚ್ಚಿನ ಸಂಸ್ಕೃತ, ಮೆಚ್ಚಿನ ತೆಲುಗು, ಬೆಚ್ಚನೆ ಹಿಂದಿ, ಹಚ್ಚನೆ ತಮಿಳು, ಮಿಕ್ಸನ ಕಂಗ್ಲಿಷ್......

ಎಂ.ಬಿ. ರಂಗಪ್ಪ ಶೆಟ್ಟಿ, ಮೋಕ
*ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ; ದೋಚಿ ಸ್ವಿಸ್ ಬ್ಯಾಂಕ್‌ನಲ್ಲಿಟ್ಟಿದ್ದು?*
ಪರದೇಶಿಗಳಿಗೆ!

ಹಾಡ್ಯ ಬಿ. ಜಯಾನಂದ, ಮೈಸೂರು
*ಟ್ಯಾಲೆಂಟ್ ಯಾರೊಬ್ಬರ ಸ್ವತ್ತಲ್ಲವಂತೆ, ತಿಕ್ಕಲುತನ?*
ಹದಿಯರೆಯದವರ ಆಸ್ತಿ, ಕೆಲವರ ಆಜನ್ಮಸಿದ್ಧ ಹಕ್ಕು!

ಎಚ್.ಆರ್. ದೇಸಾಯಿ, ರಾಯಚೂರು
*ಶ್ರೀಮಂತರು ನಗುವುದು ಏಕೆ ಕಮ್ಮಿ?*




ನಕ್ಕರೆ ಸ್ನೇಹ ಬೆಳೆಸಿ ಸಾಲ ಕೇಳಿಯಾರೆಂಬ ಭಯ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಹುಚ್ಚಾಸ್ಪತ್ರೆಯಲ್ಲಿ ಇರುವವರು ಮಾತ್ರ ಹುಚ್ಚರೇ? ಹೊರಗಡೆ ಇರುವವರು ಯಾರೂ ಹುಚ್ಚರಿಲ್ಲವೆ?*
ಇರದೇ ಏನು! ಗುಣಪಡಿಸಲಾಗುವ ಹುಚ್ಚರು ಮಾತ್ರ ಆಸ್ಪತ್ರೆಯಲ್ಲಿ ಇರುತ್ತಾರೆ, ಮಿಕ್ಕವರು ಹೊರಗೆ!

ಉದಯಶಂಕರ ರಾವ್, ದೊಡ್ಡಬಳ್ಳಾಪುರ
*ಮನುಷ್ಯನ ಕುತ್ಸಿತ ಬುದ್ಧಿಗೆ ಯಾವ ಶಸ್ತ್ರಚಿಕಿತ್ಸೆಯ ಅಗತ್ಯವಿದೆ ಮಿಸ್ಟರ್ ರಾಮ್?*
ಬೇಕಾದ್ದು ಶಸ್ತ್ರ ಚಿಕಿತ್ಸೆಯಲ್ಲ, ಮನೋವಿಕಾಸದ ಶಾಸ್ತ್ರಚಿಕಿತ್ಸೆ.

ಲ್ಯಾಂಡ್ ಬ್ಯಾಂಕ್ ಡಿ.ಚಂದ್ರಕುಮಾರ್, ಬೆಂಗಳೂರು
*ಪ್ರಸ್ತುತದಲ್ಲಿ ಜೀವನ ನಡೆಸಲು ಅನುಸರಿಸಬೇಕಾದ ದಾರಿ ದಾದಾಗಿರಿಯೋ, ಗಾಂಧಿಗಿರಿಯೋ?*
ಚಮಚಾಗಿರಿ, ಆಗದಿದ್ದರೆ ತೆಪ್ಪಗಿರಿ.

ಪಿ.ನಾಗೇಂದ್ರಪ್ಪ, ಬೆಂಗಳೂರು
*ಅತ್ತೆಯನ್ನು ರಾಕ್ಷಸಿ ಎಂದು ಕರೆದ ಸೊಸೆಯನ್ನು ಯಾವ ದರ್ಜೆಗೆ ಸೇರಿಸಬಹುದು?*
ಅಖಿಲಭಾರತ ಟಿವಿ ಸೀರಿಯಲ್ ವೀಕ್ಷಣಾಪ್ರಭಾವಿತ ಸೊಸೆಯಂದಿರ ಸಂಘಕ್ಕೆ ಸೇರಿಸಿ.

ಎಸ್.ಶ್ರೀಧರ್, ಬೆಂಗಳೂರು
*ನಮ್ಮ ಮನಸ್ಸಿಗಿಂತಲೂ ಭಾರವಾದದ್ದು ಯಾವುದು?*
ಮುಪ್ಪಿನ ಭಾರ; ಮನಸ್ಸನ್ನಾದರೂ ಹಗುರ ಮಾಡಿಕೊಳ್ಳಬಹುದು, ಮುಪ್ಪು ಇಳಿಸಲಾಗದ ಭಾರ!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ಸಿಂಧೂರತಿಲಕಕ್ಕೂ, ರಕ್ತತಿಲಕಕ್ಕೂ ಇರುವ ವ್ಯತ್ಯಾಸವೇನು ಸಾಹೇಬ್ರ?*
ಒಂದರಿಂದ ಬಾಂಡೇಜು, ಇನ್ನೊಂದರಿಂದ ಬ್ಯಾಂಡೇಜು!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಅಕಸ್ಮಾತ್ ತಲೆಯೇ ಬಿಸಿಯಾಗಿ ಕಾಲು ತಣ್ಣಗಾದರೆ ಏನಾಗುತ್ತೆ?*
ಹಿಮದ ಮೇಲೆ ನಡೆಯುವಾಗ ಷೂ ಧರಿಸಬೇಕೂಂತ ಗೊತ್ತಿಲ್ವಾ, ಅಯೋಗ್ಯ ಎಂದು ಬೈಸಿಕೊಳ್ಳಬೇಕಾಗುತ್ತದೆ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಉಪ್ಪು ತಿಂದೋರು ನೀರು ಕುಡಿಯಲೇಬೇಕು. ಲಂಚ ತಿಂದೋರು...?*
ಅವರೂ ನೀರು ಕುಡಿದೇ ಕುಡಿಯುತ್ತಾರೆ ವಿಸ್ಕಿ, ರಮ್, ಬ್ರಾಂದಿ, ವೋಡ್ಕಾಗಳ ಜೊತೆ ಬೆರೆಸಿಕೊಂಡು!

## ಬಹುಮಾನಿತ ಪ್ರಶ್ನೆ

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಗುಟಕಾ ತಿಂದು, ಧೂಮಪಾನ ಮಾಡಿ ಚಟ ಬೆಳೆಸಿಕೊಂಡು ತಮ್ಮ ಚಟ್ಟ ತಾವೇ ತಯಾರಿಸಿಕೊಳ್ಳುವವರಿಗೆ ನಿಮ್ಮ ಸಲಹೆ?*
ಹೊಗೆ ಹಾಕಕ್ಕೇ ಬಂಧುಗಳಿರೋವಾಗ ಸ್ವಯಂ ಹೊಗೆ ಏಕೆ?

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಯಾವಾಗಲೂ ತಪ್ಪು ಮಾಡುವವರು ಸಿಕ್ಕಿಬೀಳುವುದಿಲ್ಲ. ಅಪರೂಪಕ್ಕೆ ತಪ್ಪು ಮಾಡೋವ್ರೇ ಸಿಕ್ಕಬೀಳ್ತಾರಲ್ಲಾ...?*
Practice makes man perfect!

ಪಿ.ಎನ್.ಶ್ರೀವತ್ಸ, ಬೆಂಗಳೂರು
*ಎಲ್ಲಾ ಜನಾಂಗಗಳಲ್ಲಿ ಭಿಕ್ಷುಕರಿರುವಂತೆ ಸರ್ದಾರ್ಜಿಗಳಲ್ಲಿ ಏಕಿಲ್ಲ?*
ನಾನು ಎನ್ನುವ ಬದಲು ನಾವು ಎನ್ನುವ ಪರಿಶ್ರಮಿಗಳಾದ್ದರಿಂದ!

ಆರ್. ಮಧುಸೂದನ್, ಹಾಸನ
*ತೀರ್ಥಯಾತ್ರೆ ಮಾಡಬೇಕಾದ ವಯಸ್ಸಿನ ರಾಜಕಾರಣಿಗಳೆಲ್ಲಾ ಪಾದಯಾತ್ರೆ ಮಾಡುತ್ತಿದ್ದಾರಲ್ಲಾ...?*




ಅದು ತೀರ್ಥಯಾತ್ರೆಯೇ! ಮಧ್ಯ ಮದ್ಯೇ ತೀರ್ಥಂ ಆಸ್ವಾದಯಾಮಿ ಸಹ ಇರುವುದಲ್ಲ ಅವರ ಸೊಂ-ಪಾದ, ತಂ-ಪಾದ ಯಾತ್ರೆಯಲ್ಲಿ!

ಜೆ. ಸುಬ್ಬನಾಯಕ, ಬೊಮ್ಮಲಾಪುರ
*ದೇವಾಲಯಗಳಲ್ಲಿ ತುರ್ತುಸೇವೆ ದರ್ಶನ ಎಂದು ಹಣ ವಸೂಲು ಮಾಡುತ್ತಾರಲ್ಲಾ, ಏಕೆ?*
ಅದು ಅರ್ಜೆಂಟಾಗಿ ಪಾಪ ಕಳೆದುಕೊಳ್ಳಬೇಕಾದವರಿಗೆ ವಿಧಿಸುವ ವಿಶೇಷ ಫೀಸ್!

ಡಿ.ಎಲ್. ನಾಗರಾಜ್, ಚನ್ನಗಿರಿ
*ಡಿಎನ್‌ಎಗೂ, ಎನ್‌ಡಿಎಗೂ ಏನು ವ್ಯತ್ಯಾಸ?*
ಡಿಎನ್‌ಎನಲ್ಲಿ ಜೀನ್ಸ್ ಮಾತ್ರ ಇರುತ್ತವೆ. ಎನ್‌ಡಿಎನಲ್ಲಿ ಜೀನ್ಸು, ಪಂಚೆ, ಲುಂಗಿ, ಜುಬ್ಬಾ, ಬರ್ಮುಡಾ, ಫಾರ್ಮಲ್ಸ್ ಎಲ್ಲಾ ಇರುತ್ತವೆ!

■ ರಾಮ್